ಅ) ಈಗಾಗಲೇ ರಾಜ್ಯದಲ್ಲಿ ಅಸ್ಥಿತ್ವದಲ್ಲಿರುವ ಗ್ರಾಮ ಪಂಚಾಯತ್ ಕಟ್ಟಡಗಳು ಮತ್ತು ಇತರೆ ಸ್ಥಿರ ಆಸ್ತಿಗಳನ್ನು ಯಾವ ರೀತಿಯಲ್ಲಿ ಉಪಯೋಗ ಮಾಡಲು ಸರ್ಕಾರ ಚಿಂತಿಸಿದೆ.

ಆ) ಪುನರ್ರಚನೆಗೊಂಡ ನಂತರ ಬೇರೆ ಉದ್ದೇಶಕ್ಕೆ ಉಪಯೋಗಿಸಬೇಕಾಗಿರುವ ಗ್ರಾಮ ಪಂಚಾಯತ್‌ಗಳ ಕಟ್ಟಡಗಳ ಸಂಖ್ಯೆ ಎಷ್ಟು.

ಶ್ರೀ. ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಹಾಗೂ ವಾರ್ತಾ ಹಾಗೂ ಪ್ರಸಾರ ಸಚಿವರು.)

ಅ) ಗ್ರಾಮ ಪಂಚಾಯತ್‌ಗಳ ಪುನರ್‌ರಚನೆ ಕಾರ್ಯವನ್ನು ಈಗಾಗಲೇ ಕೈಗೊಳ್ಳಲಾಗಿದ್ದು ಅದು ಮುಕ್ತಾಯವಾದ ನಂತರ ಈ ಬಗ್ಗೆ ಒಂದು ನಿರ್ಧಾರವನ್ನು ತೆಗೆದುಕೊಳ್ಳಲಾಗುವುದು.

ಆ) ಈಗ ಉದ್ಭವಿಸುವುದಿಲ್ಲ.

ಕುಣಿಗಲ್ ವಿಧಾನ ಸಭಾಕ್ಷೇತ್ರದ ಹೆಬ್ಬೂರಿನಲ್ಲಿ ಪ್ರಥಮ ದರ್ಜೆಕಾಲೇಜು ತೆರೆಯುವುದು.

1060(1563)

ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(1) ಗ್ರಾಮೀಣ ಪ್ರದೇಶದ ಮಕ್ಕಳಿಗೆ ಉನ್ನತ ಶಿಕ್ಷಣ ನೀಡುವ ಹಿನ್ನಲೆಯಲ್ಲಿ ರಾಜ್ಯದಲ್ಲಿ ಹೊಸ ಪ್ರಥಮ ದರ್ಜೆ ಕಾಲೇಜುಗಳನ್ನು ತೆರೆಯಲು ಆಲೋಚನೆ ಸರ್ಕಾರಕ್ಕೆ ಇದೆಯೇ.

(2) ಹಾಗಿದ್ದಲ್ಲಿ ಕುಣಿಗಲ್ ವಿಧಾನ ಸಭಾ ಕ್ಷೇತ್ರವ್ಯಾಪ್ತಿಯಲ್ಲಿ ಬರುವ ಹೆಬ್ಬೂರಿನಲ್ಲಿ ಇಂತಹ ಕಾಲೇಜನ್ನು ತೆರೆಯಲಾಗುವುದೆ ?

ಶ್ರೀ ಬಿ.ಎ. ಮೊಹಿದ್ದೀನ್ (ಉನ್ನತ ಶಿಕ್ಷಣ ಸಚಿವರು)

(1) ಇಲ್ಲ

(2) ಅನ್ವಯಿಸುವುದಿಲ್ಲ

ಸ್ವಸ್ತಿ ಯೋಜನೆಯ ಅನುಷ್ಠಾನ.

1061(1565)

ಶ್ರೀ ಎಸ್.ಪಿ. ಮುದ್ದು ಹನುಮೇಗೌಡ (ಕುಣಿಗಲ್) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.

ಅ) ಸಮಗ್ರ ಗ್ರಾಮೀಣಾಭಿವೃದ್ಧಿ ಹಿನ್ನಲೆಯಲ್ಲಿ ರೂಪಿಸಲಾಗಿದ್ದ ಸ್ವಸ್ತಿ ಯೋಜನೆಯು ಜಾರಿಯಲ್ಲಿ ಇದೆಯೇ.

ಆ) ಹಾಗಿದ್ದಲ್ಲಿ ಅದರ ಪ್ರಗತಿ ಏನು ?

ಶ್ರೀ. ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್. ಸಚಿವರು.)

ಇದೆ.

ಅ) ಇದೆ.

ಆ) ಇದುವರೆವಿಗೂ ರೂ. 151.95ಲಕ್ಷ ವಿರ್ಚಾಗಿರುತ್ತದೆ.

ಪ್ರಾಥಮಿಕ ಆರೋಗ್ಯ ಘಟಕಗಳನ್ನು ಮುಚ್ಚುವ ಪ್ರಸ್ತಾಪನೆ

1062 (1578)